**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿಸೋಜ ಇವರು ನಿಯಮ-72ರಡಿಯಲ್ಲಿ ಗಮನ ಸೆಳೆಯುವ ಸೂಚನೆ ಸಂಖ್ಯೆ:16ಕ್ಕೆ ಮಾನ್ಯ ಲೋಕೋಪಯೋಗಿ ಇಲಾಖಾ ಸಚಿವರ ಉತ್ತರ**

*******

**ಸೂಚನೆ:**

ಲೋಕೋಪಯೋಗಿ ಇಲಾಖೆಗೆ ಸೇರಿದ ವಿಶೇಷ ಕಟ್ಟಡಗಳ ಉಪ ವಿಭಾಗ, ಉಚ್ಚ ನ್ಯಾಯಾಲಯ, ಬೆಂಗಳೂರು ಕಛೇರಿಯಲ್ಲಿ ಅಲ್ಲಿನ ಸಿಬ್ಬಂದಿಗಳಂದ ಅನಾಮಧೇಯ ವ್ಯಕ್ತಿಗಳ ಬರ್ತ್‌ಡೇ ಪಾರ್ಟಿ (ಹುಟ್ಟುಹಬ್ಬ) ಯನ್ನು ನಿಯಮಬಾಹಿರವಾಗಿ ಆಚರಿಸಿದ್ದು, ಸಾರ್ವಜನಿಕ ವಲಯದಲ್ಲಿ ಸುದ್ದಿಯಾಗಿದೆ. ಸರ್ಕಾರಿ ಕಛೇರಿಯಲ್ಲಿ ಈ ರೀತಿ ಬರ್ತ್‌ಡೇ ಪಾರ್ಟಿ ಮತ್ತು ಮದ್ಯದ ಪಾರ್ಟಿ ಆಚರಿಸಿಕೊಳ್ಳುವುದರ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ಕೈಗೊಂಡ ಕ್ರಮಗಳು ಮತ್ತು ರಾಜ್ಯದಲ್ಲಿ ಇಂತಹ ಘಟನೆ ಪದೇ ಪದೇ ನಡೆಯುತ್ತಿದ್ದು, ಇದೊಂದು ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿರುವುದರಿಂದ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಲೋಕೋಪಯೋಗಿ ಇಲಾಖೆ ವಿಶೇಷ ಕಟ್ಟಡಗಳ ಉಪ ವಿಭಾಗ, ಬೆಂಗಳೂರು ಉಚ್ಚ ನ್ಯಾಯಾಲಯ ಬೆಂಗಳೂರು ಇಲ್ಲಿನ ಸಿಬ್ಬಂದಿಗಳಂದ ಅನಾಮಧೇಯ ವ್ಯಕ್ತಿಗಳ ಹುಟ್ಟುಹಬ್ಬವನ್ನು ಆಚರಿಸಿರುವುದಾಗಿ ತಿಳಿದು ಬಂದಿದ್ದರ ಹಿನ್ನೆಲೆಯಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಕೇಂದ್ರ), ಶಿವಮೊಗ್ಗ ಇವರ ನೇತೃತ್ವದಲ್ಲಿ ತನಿಖಾ ವರದಿಯನ್ನು ಪಡೆದು, ಈ ತನಿಖಾ ವರದಿಯಲ್ಲಿ ಲೋಕೋಪಯೋಗಿ ಇಲಾಖೆ ವಿಶೇಷ ಕಟ್ಟಡಗಳ ಉಪ ವಿಭಾಗ, ಬೆಂಗಳೂರು ಇಲ್ಲಿನ ಅಧಿಕಾರಿ/ಸಿಬ್ಬಂದಿಗಳಂದ ಶ್ರೀಮತಿ ಮೀನಾ. ಸಹಾಯಕ ಇಂಜಿನಿಯರ್, ಇವರನ್ನು ಉಚ್ಛ ನ್ಯಾಯಾಲಯ ಬೆಂಗಳೂರು ಕಛೇರಿಗೆ ಕರೆಸಿಕೊಂಡು ನಿಯಮಬಾಹಿರವಾಗಿ ಕಛೇರಿಯಲ್ಲಿ ಹುಟ್ಟುಹಬ್ಬ ಆಚರಣೆ ಮಾಡಿರುವುದು ಹಾಗೂ ಮಾನ್ಯ ಉಚ್ಛ ನ್ಯಾಯಾಲಯವು ಪಾರಂಪರಿಕ ಕಟ್ಟಡ ಹಾಗೂ ಅತೀ ಸೂಕ್ಷ್ಮ ಪ್ರದೇಶವಾಗಿದ್ದು ಹುಟ್ಟುಹಬ್ಬದ ಆಚರಣೆಯನ್ನು ಮೇಲಾಧಿಕಾರಿಗಳ ಗಮನಕ್ಕೆ ತರದೇ ಸಿಸಿ ಕ್ಯಾಮರಾ ಸ್ವಿಚ್ ಆಫ್ ಮಾಡಿ, ಹುಟ್ಟುಹಬ್ಬವನ್ನು ನಿಯಮಬಾಹಿರವಾಗಿ ಆಚರಿಸಿ ಕರ್ತವ್ಯ ಲೋಪವೆಸಗಿರುವ ಆರೋಪವು ಮೇಲ್ನೋಟಕ್ಕೆ ಕಂಡುಬಂದಿದ್ದರ ಹಿನ್ನೆಲೆಯಲ್ಲಿ ಈ ಕೆಳಕಂಡ ಅಧಿಕಾರಿ/ ನೌಕರರನ್ನು ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಿ ದಿನಾಂಕ:05.04.2025 ರಂದು ಆದೇಶ ಹೊರಡಿಸಲಾಗಿರುತ್ತದೆ.

1. ಶ್ರೀ ನವೀನ್, ಸಹಾಯಕ ಇಂಜಿನಿಯರ್
2. ಶ್ರೀ ಅಮಿತ್ ಎಸ್ ಆನದಿನ್ನಿ, ಸಹಾಯಕ ಇಂಜಿನಿಯರ್
3. ಶ್ರೀಮತಿ ಎನ್.ಮೀನ, ಸಹಾಯಕ ಇಂಜಿನಿಯರ್
4. ಕು.ಲಾವಣ್ಯ, ಸಹಾಯಕ ಇಂಜಿನಿಯರ್
5. ಶ್ರೀ ಜಿ.ಹೆಚ್.ಚಿಕ್ಕೇಗೌಡ, ಪ್ರಥಮ ದರ್ಜೆ ಸಹಾಯಕ

ಮುಂದುವರೆದು, ಈ ಕೆಳಕಂಡ ನೌಕರ/ಸಿಬ್ಬಂದಿಯನ್ನು ಬೇರೆ ಕಛೇರಿಗೆ ವರ್ಗಾವಣೆ ಮಾಡಲಾಗಿರುತ್ತದೆ.

1. ಶ್ರೀಮತಿ ಅಂಬಿಕಾ. ದ್ವಿತೀಯ ದರ್ಜೆ ಸಹಾಯಕ
2. ಶ್ರೀಮತಿ ಮೇಘ.ಡಿ, ದ್ವಿತೀಯ ದರ್ಜೆ ಸಹಾಯಕ
3. ಶ್ರೀ ರಜನೀಶ್.ಎಸ್. ದ್ವಿತೀಯ ದರ್ಜೆ ಸಹಾಯಕ
4. ಶ್ರೀಮತಿ ವೆಂಕಟಮ್ಮ. ಗ್ರೂಪ್-ಡಿ

ಈ ಪ್ರಕರಣದಲ್ಲಿ ಶ್ರೀಮತಿ ಮೀನಾ.ಎನ್. ಇವರು ಅಮಾನತ್ತು ಆದೇಶವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ:2495/2025 ನ್ನು ದಾಖಲಿಸಿದ್ದು, ಪ್ರಕರಣ ನ್ಯಾಯಮಂಡಳಿಯಲ್ಲಿ ಬಾಕಿಯಿರುತ್ತದೆ.

.....2

ಈ ಪ್ರಕರಣದ ಹುಟ್ಟುಹಬ್ಬ ಆಯೋಜನೆಯಲ್ಲಿ ಶ್ರೀ ಅಮಿತ್ ಎಸ್.ಆನದಿನ್ನಿ, ಸಹಾಯಕ ಇಂಜಿನಿಯರ್, ಶ್ರೀ ನವೀನ್, ಸಹಾಯಕ ಇಂಜಿನಿಯರ್, ಮತ್ತು ಕು.ಲಾವಣ್ಯ, ಸಹಾಯಕ ಇಂಜಿನಿಯರ್, ರವರುಗಳ ಪಾತ್ರ ಇಲ್ಲದೇ ಇರುವ ಬಗ್ಗೆ ಪರಿಶೀಲಿಸಿ ಸದರಿಯವರುಗಳ ಅಮಾನತ್ತು ಆದೇಶಗಳನ್ನು ರದ್ದುಪಡಿಸಿ ಆದೇಶಿಸಲಾಗಿರುತ್ತದೆ, ಹಾಗೂ ಶ್ರೀ ಜಿ.ಹೆಚ್.ಚಿಕ್ಕೇಗೌಡ, ಪ್ರ.ದ.ಸ. ಇವರ ಅಮಾನತ್ತು ಆದೇಶವನ್ನು ತೆರವುಗೊಳಿಸಿ ಸೇವೆಗೆ ಪುನರ್ ಸ್ಥಾಪಿಸಲಾಗಿರುತ್ತದೆ.

**ಲೋಇ 469 ಸೇಇವಿ 2025**

(ಸತೀಶ್ ಜಾರಕಿಹೊಳಿ)
ಮಾನ್ಯ ಸಚಿವರು
ಲೋಕೋಪಯೋಗಿ ಇಲಾಖೆ

*********